# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕೋರಮಂಗಲ ಉಪ-ವಿಭಾಗದ, ಈಜೀಪುರ ವಾರ್ಡ್ ಸಂಖ್ಯೆ-148 ದಿನಾಂಕ:15-10-2022 ರಂದು ಅಕ್ಟೋಬರ್-2022 ರ ವಾರ್ಡ್ ಸಮಿತಿಯ ಮಾಸಿಕ ಸಭೆಯ ನಡವಳಿಗಳು

ಶ್ರೀಮತಿ ರೂಪ, ಸಹ ಕಂದಾಯ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148ರ ರವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ಕಛೇರಿ, **Hot mix plant, 80 feet road,** ಈಜೀಪುರ, ಬೆಂಗಳೂರು ರಲ್ಲಿ ದಿನಾಂಕ:15.10.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದವರು:-**

1. ಡಾ. ಪ್ರಕಾಶ್ ರೆಡ್ಡಿ
2. ಶ್ರೀಮತಿ ಗಂಗಾಂಬಿಕೆ
3. ಶ್ರೀ ಲಕ್ಷ್ಮೀಪತಿ
4. ಶ್ರೀ ಪಿ. ಬಾಲಕೃಷ್ಣನ್
5. ಶ್ರೀ ವಸಂತಕುಮಾರ್
6. ಶ್ರೀ ಎಂ.ವಿ.ಕೆ. ಅನಿಲ್ ಕುಮಾರ್
7. ಶ್ರೀ ಆರ್. ಪ್ರದೀಪ್
8. ಶ್ರೀ ಎಂ. ರಾಜೇಂದ್ರಬಾಬು

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀಮತಿ ರೂಪ, ಸಹ ಕಂದಾಯ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148
2. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-148 ಈಜೀಪುರ
3. ಶ್ರೀ ಟಿ.ಎಸ್. ಮುತ್ತುರಾಜ, ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ.
4. ಶ್ರೀ ಜಗದೀಶ, ಮೌಲ್ಯಮಾಪಕರು
5. ಶ್ರೀ ಎನ್. ನಾಗರಾಜ್, ಸೂಪರ್‌ವೈಸರ್, ಬಿ.ಬಿ.ಎಂ.ಪಿ.

* * * * *

ಶ್ರೀಮತಿ ರೂಪ, ಸಹ ಕಂದಾಯ ಅಧಿಕಾರಿಗಳು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148 ರವರು ಸಭೆಗೆ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ಸಭೆಯಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಕುಂದುಕೊರತೆಗಳನ್ನು ಚರ್ಚಿಸುವಂತೆ ತಿಳಿಸಿದರು.

ಶ್ರೀ ವಸಂತ್ ಕುಮಾರ್ ರವರು ಮಾತನಾಡಿ, ಶ್ರೀನಿವಾಗಿಲು ಸಿಗ್ನಲ್ ಬಳಿ 27ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆಯಲ್ಲಿ ಹೊರ ವರ್ತುಲ ರಸ್ತೆ ಕಡೆಗೆ ಪ್ರವೇಶದ್ವಾರದಲ್ಲಿ ಕಾಂಕ್ರೀಟ್ ಅಪ್ರೋಚ್ ರ್‍ಯಾಂಪ್ ನಿರ್ಮಿಸಿಕೊಡಬೇಕೆಂದು ಈ ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸಲಾಗಿದ್ದು, ಆದರೆ ಇದೂವರೆವಿಗೂ ಈ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ. ಆದ್ದರಿಂದ ಶೀಘ್ರವಾಗಿ ಕಾಂಕ್ರೀಟ್ ಅಪ್ರೋಚ್ ರ್‍ಯಾಂಪ್ ನಿರ್ಮಿಸಿಕೊಡಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಕೋರಮಂಗಲ ಉಪವಿಭಾಗ**



Scanned by CamScanner

ಶ್ರೀಮತಿ ಗಂಗಾಂಬಿಕೆ ರವರು ಮಾತನಾಡಿ, ಪೊಲೀಸ್ ಇಲಾಖಾ ವತಿಯಿಂದ ಸೇಫ್ ಸಿಟಿ ಸ್ಕೀಮ್ ಅಡಿಯಲ್ಲಿ ಶ್ರೀನಿವಾಗಿಲು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸಲು ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿತ್ತು. ಆದರೆ ಇದರ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರುವ ಕಾರಣ ಮುಂದಿನ ಸಭೆಯಲ್ಲಿ ತೆಗೆದುಕೊಂಡಿರುವ ಕ್ರಮದ ವರದಿಯನ್ನು ಸಭೆಗೆ ಮಂಡಿಸಲು ಕೋರಿದರು.

**ಕ್ರಮ: ಆರಕ್ಷಕ ನಿರೀಕ್ಷಕರು,**
**ಅಶೋಕನಗರ ಸಂಚಾರ ಪೊಲೀಸ್ ಠಾಣೆ**

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಕೋರಮಂಗಲ ಚಲಘಟ್ಟ ಕೆ–100 ವ್ಯಾಲಿಯ ತಳದಲ್ಲಿ ಅಳವಡಿಸಿರುವ 2000 ಎಂ.ಎಂ. ವ್ಯಾಸದ ಒತ್ತಡದಿಂದ ನಿರ್ವಹಿಸುವ ಒಳಚರಂಡಿ ಕೊಳವೆಯನ್ನು ವಿನ್ಯಾಸದಂತೆ ಅಳವಡಿಸದೆ, 1 ಮೀಟರ್ ಮೇಲೆ ಅಳವಡಿಸಿರುವುದರಿಂದ ನೀರನ್ನು ಸಾಗಿಸುವ ಸಾಮರ್ಥ್ಯ ಕುಗ್ಗಿರುವುದರಿಂದ ಕೆಳಭಾಗದ ಪ್ರದೇಶಗಳಲ್ಲಿ ಪ್ರವಾಹ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು ಎನ್.ಜಿ.ವಿ. ಯಿಂದ ಚಲಘಟ್ಟ ವ್ಯಾಲಿಗೆ ಸಂಪರ್ಕಿಸುವ ಪೈಪ್‌ಲೈನ್ ರಸ್ತೆ ಮುಖಾಂತರ ಹಾದು ಹೋಗಿರುವ ಹಳೆಯ ಒಳಚರಂಡಿ ಮಾರ್ಗವನ್ನು ಪ್ರವಾಹದ ಸಂದರ್ಭಗಳಲ್ಲಿ ನೀರನ್ನು ಹರಿಬಿಡಲು ಉಪಯೋಗಿಸುವ ಬಗ್ಗೆ ಈ ಹಿಂದಿನ ಸಭೆಯಲ್ಲಿ ಕಾರ್ಯಸಾಧ್ಯತೆ ವರದಿಯನ್ನು ಸಿದ್ಧಪಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ / ಡಬ್ಲ್ಯೂ.ಡಬ್ಲ್ಯೂ.ಎಂ. ಮತ್ತು ಬಿ.ಬಿ.ಎಂ.ಪಿ. ಎಸ್.ಡಬ್ಲ್ಯೂ.ಡಿ ರವರಿಗೆ ಜಂಟಿಯಾಗಿ ಸ್ಥಳ ತಪಾಸಣೆ ಕೈಗೊಳ್ಳುವಂತೆ ತಿಳಿಸಿದ್ದು, ಈ ಬಗ್ಗೆ ವರದಿಯನ್ನು ಮುಂದಿನ ಸಭೆಯಲ್ಲಿ ತಿಳಿಸುವಂತೆ ಕೋರಿದರು.

ಎನ್.ಜಿ.ವಿ. ವೆಟ್‌ವೆಲ್ ನಿರ್ಮಿಸಿ, ಪಂಪ್‌ಗಳನ್ನು ಅಳವಡಿಸಿ, ಕೆ–100 ವ್ಯಾಲಿಯ ತಳದಲ್ಲಿ ಅಳವಡಿಸಿರುವ 2000 ಎಂ.ಎಂ. ವ್ಯಾಸದ ಒತ್ತಡದಿಂದ ನಿರ್ವಹಿಸುವ ಒಳಚರಂಡಿ ಕೊಳವೆಯನ್ನು ನಿರ್ವಹಿಸಲು 130.00 ಕೋಟಿಗಳ ವೆಚ್ಚದಲ್ಲಿ 12 ಪಂಪ್‌ಗಳನ್ನು ಸ್ಥಾಪಿಸಿದ್ದು, ಪ್ರಸ್ತುತ ಈ ಪಂಪ್‌ಗಳಲ್ಲಿ ಎಷ್ಟು ಪಂಪ್‌ಗಳು ಕಾರ್ಯನಿರ್ವಹಿಸುತ್ತಿವೆ ಎಂಬ ವರದಿಯನ್ನು ಮುಂದಿನ ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸುವಂತೆ ಕೋರಿದರು.

**ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು,**
**ಬಿ.ಡಬ್ಲ್ಯೂ.ಎಸ್.ಎಸ್.ಬಿ. ಡಬ್ಲ್ಯೂ.ಡಬ್ಲ್ಯೂ.ಎಂ.**
**ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು,**
**ಎಸ್.ಡಬ್ಲ್ಯೂ.ಡಿ., ಡಬ್ಲ್ಯೂ.ಡಬ್ಲ್ಯೂ.ಎಂ**

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಅಶ್ವಿನಿ ಲೇಔಟ್ ಬಡಾವಣೆ ವೆಟ್‌ವೆಲ್‌ನಿಂದ 20ನೇ 'ಎಲ್' ಅಡ್ಡರಸ್ತೆವರೆಗೂ ಮಳೆ ನೀರು ಚರಂಡಿಯಲ್ಲಿರುವ ಹೂಳನ್ನು ತೆರವುಗೊಳಿಸುವಂತೆ ಸಭೆಯಲ್ಲಿ ಕೋರಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಮಾತನಾಡಿ, ಅಂದಾಜು ಪಟ್ಟಿಯನ್ನು ಅಳವಡಿಸಿಕೊಂಡು ಕಾಮಗಾರಿಯನ್ನು ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಕೋರಮಂಗಲ ಉಪವಿಭಾಗ**

ಶ್ರೀ ರಾಜೇಂದ್ರ ಬಾಬು ರವರು ಮಾತನಾಡಿ, ಮಹಾರಾಜ ಸಿಗ್ನಲ್ ಸೇತುವೆ ಬಳಿ ಅಪ್ರೋಚ್ ಕುಸಿದು, ಗುಂಡಿಗಳಾಗಿದ್ದು, ಡಾಂಬರು ಹಾಕಿ ಗುಂಡಿಗಳನ್ನು ಮುಚ್ಚುವಂತೆ ಸಭೆಯಲ್ಲಿ ಕೋರಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಮಾತನಾಡಿ, ಮುಂದಿನ ವಾರ್ಡ್ ಸಮಿತಿ ಸಭೆಯ ಒಳಗಾಗಿ ಗುಂಡಿಗಳನ್ನು ಮುಚ್ಚಲಾಗುವುದು ಎಂದು ಸಭೆಗೆ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಕೋರಮಂಗಲ ಉಪವಿಭಾಗ**



Scanned by CamScanner

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಎಸ್.ಡಬ್ಲ್ಯೂ.ಎಂ. ಬಿ.ಬಿ.ಎಂ.ಪಿ. ವಾರ್ಡ್ ನಂ.147, 148, 152 & 173 ಗಳಿಗೆ ಸಂಬಂಧಿಸಿದಂತೆ, ಘನತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ರೂ.10.00 ಕೋಟಿಗಳ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಈ ಬಗ್ಗೆ ರೂಪುರೇಷೆಗಳನ್ನು ಮತ್ತು ನಕ್ಷೆಯನ್ನು ಮುಂದಿನ ಸಭೆಗೆ ಒದಗಿಸಲು ಕೋರಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಎಸ್.ಡಬ್ಲ್ಯೂ.ಎಂ. ಬಿ.ಬಿ.ಎಂ.ಪಿ.**

ಕೊನೆಯದಾಗಿ, ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾಗಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಅನುಷ್ಠಾನ ವರದಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಿ ಮಾಹಿತಿ ಒದಗಿಸಲು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| (ಪ್ರದೀಪ್ ಕುಮಾರ್ .ಆರ್) | (ಶ್ರೀವತ್ಸ ರೂಪ) 15/10/22 |
| ಸದಸ್ಯ ಕಾರ್ಯದರ್ಶಿ | ನೋಡಲ್ ಅಧಿಕಾರಿಗಳು |
| ಹಾಗೂ ಸಹಾಯಕ ಅಭಿಯಂತರರು, | ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು |
| ವಾರ್ಡ್-148 ಈಜೀಪುರ | ವಾರ್ಡ್-148 ಈಜೀಪುರ |



Scanned by CamScanner

ವಾರ್ಡ್: 148 ಕೆಂಪಾಪುರ ವಾರ್ಡ್ ಸಮಿತಿ ಸಭೆ

ದಿ: 15/10/2022 ಸಮಯ: 11.00 AM

ಹಾಜರಿದ್ದ ಅಧಿಕಾರಿಗಳು

1) MUTTURAJA J.H.I
2) N. Nagaraj S/D
3) Jayalakshmi Assessor
4) DR. JOSHUA M E Rajan

ಹಾಜರಿದ್ದ ಸದಸ್ಯರುಗಳು

1 ಡಾ|| [illegible]
2. Gangambika
3 LAKSHMI PATHY ERWT 9886930614
4 P. BALAKRISHNAN
5 Vasantha kumar 9900552847
6 M.V.K. Anilkumar 9845813345
7 R. PRADEEP 9845282505
M. Rajendra Babu 9945800198
Raju
~~DR. JOSHUA M.E. Rajan~~

Scanned by CamScanner



Scanned by CamScanner



Scanned by CamScanner